ಸಂಪೂರ್ಣ ನಿದ್ರೆಗೆ ಜಾರಿಬಿಡುತ್ತೇನೆನ್ನುವ ಹೊತ್ತಿಗೆ ಮುಖದ ಮೇಲೆ ಏನೋ ಗುಳುಗುಳು ಜಿಗಿದೆದ್ದು ನಿಂತೆ. ಕಾದಿದ್ದಳೇನೋ ಎನ್ನುವಂತೆ ಶಾಕಾಂಬರಿ ಓಡಿಬಂದು ಲೈಟ್ ಹಾಕಿದಳು. ಏನೋ ಕಸವೆಂದು ಹಾಸಿಗೆಯನ್ನು ಜಾಡಿಸಿದೆ. ಜೇಡವೊಂದು ಕೆಳಗೆ ಬಿದ್ದಿತು. ಇದನ್ನೇ ನೆಪ ಮಾಡಿಕೊಂಡು, ಇಲ್ಲಿ ಸ್ವಲ್ಪ ಜೇಡಗಳ ಕಾಟ ಜಾಸ್ತಿಯೇ ಬಾ ಅಲ್ಲೇ ಮಲಗೋಣ ಎಂದು ರೂಮಿಗೆ ಕರೆದೊಯ್ದಳು. ಇನ್ನೊಂದು ಮೂರು ತಾಸಿಗೆ ಹೇಗೂ ಬೆಳಕು ಹರಿಯುತ್ತದಲ್ಲ ಎಂದು ಶಾಕಾಂಬರಿಗೆ ಬೆನ್ನು ಹಾಕಿ ಕಿಟಕಿಗೆ ಕಣ್ಣಂಟಿಸಿದೆ. ಸೂಸುಗಾಳಿಗೆ ಬೇಗನೇ ನಿದ್ದೆಬಂದಿತು. ಸ್ವಲ್ಪ ಹೊತ್ತಿಗೆ ಮಗ್ಗಲು ಬದಲಿಸಲೂ ಆಗದಂತೆ ನನ್ನನ್ನು ಗಟ್ಟಿಯಾಗಿ ಕಟ್ಟಿಹಾಕಿದಂತೆ ಅನ್ನಿಸಿತು. ಉಸಿರಾಟ ಕಷ್ಟವಾಯಿತು. ಕಣ್ಬಿಟ್ಟರೆ ಎಷ್ಟೋ ದಿನಗಳಿಂದ ಕಿವಿಯ ಬಳಿ ಬಂದು ಹೂಂಗುಟ್ಟುತ್ತಿದ್ದ ಬೂದು ಪಾರಿವಾಳ ಇಂದು ಗಟ್ಟಿಯಾಗಿ ನನ್ನ ಭುಜಕ್ಕೇ ಕಾಲೂರಿ ನಿಂತಿತ್ತು! ಅದರ ಕಣ್ಣುಗಳಲ್ಲಿ ಸಮುದ್ರವೊಂದು ಕ್ಷಣ ಇಂಗುತ್ತಿತ್ತು, ಕ್ಷಣ ಉಕ್ಕುತ್ತಿತ್ತು. ಅದಕ್ಕೆ ಗೊತ್ತು ನಾನು ಕಾಳು ಹಾಕುವುದಿಲ್ಲ ಕಾಲೂ ಕಟ್ಟುವುದಿಲ್ಲವೆಂದು. ಆದರೂ ಎಂಟುದಿಕ್ಕುಗಳಿಗೂ ಕೇಳುವಂತೆ ರೆಕ್ಕೆ ಪಟಪಟಿಸುತ್ತ ಒಂದೇಸಮ ವಿಜಯದ ಪತಾಕೆ ಹಾರಿಸುತ್ತಿತ್ತು. ಅದರ ಉಗುರುಗಳು ಭುಜದೊಳಗೆ ನೆಟ್ಟಷ್ಟೂ ನಾನು ಕುಸಿಯುತ್ತಿದ್ದೆ. ಅವು ಬೇರಿನಂತೆ ನನ್ನೆದೆಗಿಳಿದು ತನಗೆ ಬೇಕಾದ ಸಾರವನ್ನೆಲ್ಲ ಹೀರಿಕೊಳ್ಳಹತ್ತಿದವು. ದಳದಳಿಸುತ್ತಿದ್ದ ನನ್ನ ಕಣ್ಣೀರು ಕಿವಿಯ ಸುಳಿ ಬಳಸುತ್ತಿತ್ತು. ದೀರ್ಘ ಉಸಿರೆಳೆದುಕೊಂಡೆ, ಅದು ನಾಭಿಯಾಳಕ್ಕೆ ಚಲಿಸಿ ನನ್ನನ್ನು ಇನ್ನಷ್ಟು ಬಿಗಿಗೊಳಿಸಿತು; ಸಹನೆಯು ಟಿಸಿಲೊಡೆಯುವಾಗ ಮೌನವನ್ನಷ್ಟೇ ಆಲಿಸುತ್ತಿರಬೇಕು.

★★★

ಬೆಳಕು ಹರಿಯುವ ಮೊದಲೇ ನಮ್ಮ ಮನೆಯೊಳಗಿದ್ದೆ. ಅಮ್ಮ ಅಪ್ಪ ಆಫೀಸಿಗೆ ಹೊರಟಿದ್ದು ಮುಂಬಾಗಿಲಿಗೆ ಕೀಲಿಯಾಡುವಾಗಿನ ಶಬ್ದದಿಂದ ತಿಳಿದರೂ ಎದ್ದು ಬರಬೇಕು ಅನ್ನಿಸಲಿಲ್ಲ. ಎಚ್ಚರಾದಾಗ ಇಡೀ ಆಕಾಶವೇ ನನ್ನನ್ನು ಕವುಚಿಹಾಕಿಕೊಂಡಂತಾಗಿತ್ತು. ಅಂದಾಜಿನ ಮೇಲೆ ಕೈಯ್ಯಾಡಿಸಿ ಸ್ವಿಚ್ ಆನ್ ಮಾಡಿದೆ. ನನ್ನ ಬೆಡ್ರೂಮಿನ ಟೇಬಲ್ ಲ್ಯಾಂಪಿನೊಳಗೆ ಚಂದಿರ ಜೀವಹಿಡಿದು ಕುಳಿತಂತ್ತಿದ್ದ. ಗಡಿಯಾರ ಸಂಜೆಯ ಏಳು ತೋರಿಸುತ್ತಿತ್ತು. ಎದ್ದು ಬಿಸಿಬಿಸಿ ನೀರು ಹುಯ್ದುಕೊಂಡೆ. ಕಂಗಾಲು ಹಸಿವಾಗಿತ್ತು, ಅಡುಗೆಮನೆಗೆ ಹೋದೆ ಏನೂ ತಿನ್ನಬೇಕೆನ್ನಿಸಲಿಲ್ಲ.

ಫೋನ್, 'ಥ್ಯಾಂಕ್ಸಮ್ಮಾ ಪ್ರೀತಾ, ನೀನರ ನನ್ನ ಮಗಳ್ನ ಅರ್ಥ ಮಾಡಿಕೊಂಡ್ಯಲ್ಲ ನನಗಷ್ಟ್ ಸಾಕವಾ. ಮತ್ಮತ್ ಬರ್ತಿರು ನಮ್ ಮನೀಗೆ.'


**ಶ್ರೀದೇವಿ ಕಳಸದ**

ಮುದ್ರಣ ಮತ್ತು ಎಲೆಕ್ಟ್ರಾನಿಕ್ ಮಾಧ್ಯಮಗಳಲ್ಲಿ ಸುಮಾರು ದಶಕದ ಕಾಲ ಕಾರ್ಯ ನಿರ್ವಹಿಸಿದ್ದಾರೆ. ಅವರ 'ಹಾಡಾಗದ ಸಾಲುಗಳು' ಕವನ ಸಂಕಲನವನ್ನು ಬೆಂಗಳೂರಿನ 'ಅಂಕಿತ ಪುಸ್ತಕ' ಪ್ರಕಟಿಸಿದೆ. ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತದಲ್ಲಿಯೂ ಪರಿಣತಿ ಇರುವ ಶ್ರೀದೇವಿ ತಮ್ಮ ಅಂತರಂಗದ ಧ್ವನಿಗೆ ಸಾಹಿತ್ಯ ಕ್ಷೇತ್ರವನ್ನು ಆಯ್ಕೆ ಮಾಡಿಕೊಂಡಿದ್ದಾರೆ.